**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *31.01.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ *1* ನೇ ಆರೋಪಿತರ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ</u>**

. ನಾನು ಮತ್ತು ಶಿವರಾಜಪ್ಪ ಒಂದೇ ಮನೆಯಲ್ಲಿ ವಾಸವಿದ್ದೇವು ಎಂದರೆ ನಿಜ. ನನ್ನ ಅಣ್ಣ ಬೇರೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ನಿಜ. ನಮ್ಮ ಕುಟುಂಬಕ್ಕೆ ನಾವು ವಾಸವಿದ್ದ ಮನೆಯಲ್ಲದೇ ಇನ್ನೊಂದು ಮನೆಯಿದೆ ಎಂದರೆ ನಿಜ. ಆ ಇನ್ನೊಂದು ಮನೆ ನನ್ನ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಶಿವರಾಜಪ್ಪನ ನಡುವೆ ಭಾಗವಾಗಿರಲಿಲ್ಲ. ನಾವಿಬ್ಬರು ಜಮೀನುಗಳಲ್ಲಿ ಬೇರೆ ಬೇರೆ ವ್ಯವಸಾಯ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಶಿವರಾಜಪ್ಪ ಮತ್ತು ಅವರ ಮಕ್ಕಳು ನನ್ನನ್ನು ಬೇರೆ ಮನೆಗೆ ಹೊಗುವಂತೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನನ್ನ ಮತ್ತು ಅವರ ನಡುವೆ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ನನ್ನ ವಿರುದ್ಧ ಪ್ರೀತಿ ಮನೆ ಕುರಿತು ದೂರು ಕೊಟ್ಟಿದ್ದಾಳೆ ಎಂದರೆ ಸರಿಯಲ್ಲ. ನಾನು ಮತ್ತು ಶಾಂತಪ್ಪ ಇತ್ತೀಚಿಗೆ ಪೋ.ಠಾಣೆಗೆ ಹೋಗಿದ್ದೇವು ಎಂದರೆ ನಿಜ. ಆ ಮನೆ ವಿಚಾರಕ್ಕೆ ಪೋ.ಠಾಣೆಗೆ ಹೋಗಿದ್ದೇವು ಎಂದರೆ ಸರಿಯಲ್ಲ. ಪವನ್ ಕುಮಾರ್ ಮತ್ತು ಪ್ರೀತಿಯ ನಡುವಿನ ಪ್ರೀತಿ ಪ್ರೇಮದ ವಿಚಾರಕ್ಕೆ ನಾನು ಯಾವತ್ತು ಮಲ್ಲಿಗಮ್ಮನನ್ನು ಭೇಟಿ ಮಾಡಿಲ್ಲ ಎಂದರೆ ನಿಜ. ಮಲ್ಲಿಗಮ್ಮಳೇ ತನ್ನ ಮಗಳನ್ನು ಪವನ್ ಕುಮಾರ್ ಗೆ ಕೊಟ್ಟು ಮದುವೆ ಮಾಡುವುದಾಗಿ ಹೇಳಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅವರ ನಡುವೆ ಭಿನ್ನಾಭಿಪ್ರಾಯ ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ನಾನು ಆ ಸಮಸ್ಯೆ ವಿಚಾರಕ್ಕೆ ಮಲ್ಲಿಗಮ್ಮನನ್ನು ಯಾವತ್ತು ಭೇಟಿ ಮಾಡಿಲ್ಲ ಎಂದರೆ ನಿಜ.

*2.* ಮದುವೆ ವಿಚಾರಕ್ಕೆ ನಾನು ಯಾವತ್ತು ಯಾರನ್ನು ಭೇಟಿ ಮಾಡಿಲ್ಲ ಎಂದರೆ ನಿಜ. ಶರತ್ ಕುಮಾರ್ ಇವರನ್ನು ಸಹ ಭೇಟಿ ಮಾಡಿಲ್ಲ ಎಂದರೆ ನಿಜ. ಬಸವಣ್ಣ ಇವರನ್ನು ಭೇಟಿ ಮಾಡಿದ್ದ ಕಾಲಕ್ಕೂ ನಾನು ಹೋಗಿರಲಿಲ್ಲ. ಮದುವೆ ಮಾತುಕತೆ ಮತ್ತು ಮದುವೆ ಒಪ್ಪಂದದ ಕಾಲಕ್ಕೂ ನಾನು ಮಲ್ಲಗಮ್ಮನ ಮನೆಗೆ ಹೋಗಿರಲಿಲ್ಲ. ಮದುವೆ ವಿಚಾರಕ್ಕೆ ಸುದರ್ಶನ್ ಮತ್ತು ಶರತ್ ಕುಮಾರ್ ಶಿವರಾಜಪ್ಪನಿಗೆ ಸಹಕಾರ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಮೊದಲಿಗೆ ಪವನ್ ಕುಮಾರ್ ನ ಮದುವೆ ನಿಗಧಿಯಾಗಿದ್ದ ದಿನಾಂಕ ಗೊತ್ತಿಲ್ಲ. ಪವನ್ ಕುಮಾರ್ ನನ್ನ ಬಳಿ ಯಾವುದೇ ಸಮಸ್ಯೆಯನ್ನು ಹೇಳಿಲ್ಲ. ಶಿವರಾಜಪ್ಪ ಜೀವಂತ ಇರುವವರೆಗೆ ಯಾವತ್ತು ಮದುವೆ ಪ್ರಸ್ತಾಪದಲ್ಲಿ ಪಾಲ್ಗೊಂಡಿಲ್ಲ. ಶಿವರಾಜಪ್ಪನ ಮರಣದ ಬಳಿಕವೇ ಪವನ್ ಕುಮಾರ್ ಮತ್ತು ಪ್ರೀತಿಯ ಮದುವೆ ವಿಚಾರಕ್ಕೆ ಭಿನ್ನಾಭಿಪ್ರಾಯ ಇದೆ ಎಂದು ನನಗೆ ಗೊತ್ತಾಗಿತ್ತು. ಶಿವರಾಜಪ್ಪ ಯಾರ ಯಾರ ಮನೆಗೆ ಹೊಗುತ್ತಿದ್ದ ಎಂದು ಗೊತ್ತಿಲ್ಲ. ಶಿವರಾಜಪ್ಪ ಇವರು ಹುಲ್ಲಹಳ್ಳಿಗೆ ಮತ್ತು ಜಮೀನಿಗೆ ಹೊಗುತ್ತಿದ್ದ ಬಗ್ಗೆ ಮಾತ್ರ ಗೊತ್ತಿದೆ. ಗಿರಿಯಯ್ಯ, ಮಹದೇವಸ್ವಾಮಿ, ಸೋಮಣ್ಣ, ವೃಷಬೇಂದ್ರ ಇವರ ಜೊತೆ ಶಿವರಾಜಪ್ಪನಿಗೆ ಸ್ನೇಹ ಇತ್ತು ಎಂದರೆ ನಿಜ. ಗಿರಿಯಯ್ಯ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದ ಎಂದರೆ ನಿಜ. ಚುನಾವಣೆ ಕಾಲಕ್ಕೆ ಶಿವರಾಜಪ್ಪ ಗಿರಿಯಯ್ಯನಿಗೆ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಹೊಸ ಮನೆ ಹಿಂಭಾಗದಲ್ಲಿ ದನ ಕೊಟ್ಟಿಗೆ ಇದೆ ಎಂದರೆ ನಿಜ ಅಲ್ಲಿಯೇ ನಾವು ದನ ಕಟ್ಟುತ್ತೇವೆ ಎಂದರೆ ನಿಜ. ಗೌರಮ್ಮನ ಮನೆ ಮುಂಭಾಗ ಖಾಲಿ ಜಾಗವಿದೆ ಎಂದರೆ ನಿಜ. ಆ ಜಾಗಕ್ಕೂ ಶಾಂತಪ್ಪನಿಗೂ ಸಂಬಂದ ಇಲ್ಲ ಎಂದರೆ ನಿಜ. ಸಾಕ್ಷಿ ಪುನಃ ಹೇಳುತ್ತಾರೆ ಆ ಜಾಗದಲ್ಲಿ ನನಗೂ ಮತ್ತು ಶಾಂತಪ್ಪನಿಗೂ ಭಾಗವಿದೆ.

3. ಗೌರಮ್ಮ ನಮಗೆ ಸಂಬಂಧಿಯಲ್ಲ. ಗೌರಮ್ಮನ ಮಗಳು ರತ್ನಮ್ಮ ಶಿವರಾಜಪ್ಪ ಮನೆಗೆ ಹೊಗುವುದು ಮತ್ತು ಶಿವರಾಜಪ್ಪನ ಮಕ್ಕಳು ಗೌರಮ್ಮನ ಮನೆಗೆ ಹೊಗುವುದು ಮಾಡುತ್ತಿರಲಿಲ್ಲ. ಶಿವರಾಜಪ್ಪ ಗೌರಮ್ಮ ಮತ್ತು ಅವರ ಮಗಳಿಗೆ ಸಹಾಯ ಮಾಡುತ್ತಿರಲಿಲ್ಲ. ಗೌರಮ್ಮನಿಗೆ ಗಂಡು ಮಕ್ಕಳು ಇದ್ದಾರೆ. ಆ ಸಂಜೆ 7.30 ರ ನಂತರ ಶಿವರಾಜಪ್ಪ ಕಾಣೆಯಾದ ಬಗ್ಗೆ ಗೊತ್ತಾಗಿತ್ತು. ಅವರು ಮನೆಗೆ ಬರದೇ ಇದುದ್ದರಿಂದ ಆ ಬಗ್ಗೆ ಗೊತ್ತಾಗಿತ್ತು. ಆ ದಿನ ಸಂಜೆ 6 ಗಂಟೆಗೆ ನಾನು ಜಮೀನಿನಿಂದ ಮನೆಗೆ ಬಂದಿದ್ದೆ. ಅದಕ್ಕೂ ಮೊದಲು ಊರಿನಲ್ಲಿ ಏನು ನಡೆದಿತ್ತು ಎಂದು ನನಗೆ ಗೊತ್ತಿಲ್ಲ. ಆ ದಿನ ಪವನ್ ಕುಮಾರ್ ಮತ್ತು ಪ್ರತಾಪ್ ಕೆಲಸಕ್ಕೆ ಹೋದವರು ನಾನು ಮನೆಗೆ ಬರುವ ಮೊದಲೇ ಬಂದಿದ್ದರು. ರಾತ್ರಿ 8 ಗಂಟೆಗಿಂತ ಮೊದಲು ಅವರು ಶಿವರಾಜಪ್ಪನನ್ನು ಹುಡುಕುವ ಪ್ರಯತ್ನ ಮಾಡಿರಲಿಲ್ಲ. ಆ ದಿನ ನಾನು ರಾತ್ರಿ 8 ರ ಬಳಿಕವೂ ಸಹ ಶಿವರಾಜಪ್ಪನನ್ನು ಹುಡುಕಲು ಹೋಗಿರಲಿಲ್ಲ. ಶಿವರಾಜಪ್ಪನ ಶವ ಸಿಗುವವರೆಗೂ ನಾನು ಎಲ್ಲಿಯೂ ಹುಡುಕಲು ಹೊಗಿರಲಿಲ್ಲ. ಶವ ಸಿಕ್ಕ ನಂತರವೂ ನಾನು ಶವ ಸಿಕ್ಕ ಜಾಗಕ್ಕೆ ಹೋಗಿರಲಿಲ್ಲ. ಶಿವರಾಜಪ್ಪ ಕಾಣೆಯಾದ 2 ದಿನಗಳ ಬಳಿಕ ಪವನ್ ಕುಮಾರ್ ದೂರನ್ನು ಕೊಟ್ಟಿದ್ದ. ಆ ದೂರು ಕೊಟ್ಟ ಬಳಿಕ ಪೋಲೀಸರು ನನ್ನನ್ನು ವಿಚಾರಿಸಿಲ್ಲ.

4. ಬಿದಿರುಗೂಡು ಗ್ರಾಮದ ಬಳಿ ಕಾಲುವೆ ನೀರು ರಭಸವಾಗಿ ಹರಿಯುತ್ತದೆ ಎಂದರೆ ಗೊತ್ತಿಲ್ಲ. ನಾನು ವ್ಯವಸಾಯದ ಕೆಲಸ ಮಾಡುತ್ತೇನೆ. ಮಚ್ಚು ಮತ್ತು ರಾಡು ಪೋಲೀಸರಿಗೆ ಸಿಕ್ಕಾಗ ನಾನು ಆ ಸ್ಥಳಕ್ಕೆ ಹೋಗಿಲ್ಲ. ಶರತ್ ಕುಮಾರ್ ಇವರು ಹೆಂಡತಿ ಮಕ್ಕಳೊಂದಿಗೆ ಒಟ್ಟಿಗೆ ವಾಸವಿದ್ದಾರೆ ಎಂದರೆ ನಿಜ. ಮಲ್ಲಿಗಮ್ಮ ತನ್ನ ಗಂಡು ಮಕ್ಕಳು ಮತ್ತು ಹೆಣ್ಣು

ಮಕ್ಕಳೊಂದಿಗೆ ವಾಸವಿದ್ದಾರೆ ಎಂದರೆ ನಿಜ. ಶರತ್ ಕುಮಾರ್ ಮತ್ತು ಮಲ್ಲಿಗಮ್ಮನ ಮನೆ ಒಂದೇ ರಸ್ತೆಯಲ್ಲಿದೆ ಎಂದರೆ ನಿಜ. ನನ್ನ ಅಣ್ಣ ಶಿವರಾಜಪ್ಪನಿಗೂ ಮತ್ತು ಆರೋಪಿತ ಶರತ್ ಕುಮಾರ್ ಗೂ ಯಾವತ್ತು ಜಗಳವಾಗಿಲ್ಲ ಮತ್ತು ಅವರಿಬ್ಬರ ನಡುವೆ ಜಮೀನಿನ ವ್ಯಾಜ್ಯ ಇಲ್ಲ ಎಂದರೆ ನಿಜ. ಘಟನೆ ನಡೆದ ದಿನ ನಾನು ಶರತ್ ಕುಮಾರ್ ಇವರ ಜಮೀನಿನ ಬಳಿ ಹೋಗಿಲ್ಲ. ಆ ಜಮೀನು ಊರಿಗೆ ಸಮೀಪದಲ್ಲೇ ಇದೆ ಎಂದರೆ ನಿಜ. ಆ ಜಮೀನಿನ ಅಕ್ಕಪಕ್ಕದಲ್ಲಿ ಮನೆಗಳಿವೆ ಎಂದರೆ ನಿಜ. ಆ ಜಮೀನಿನಲ್ಲಿ ಗಲಾಟೆ ಆದರೆ ಊರಲ್ಲಿ ಇರುವ ಮನೆಗಳಿಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ಗೌರಮ್ಮನ ಮನೆಯಿಂದ ಶರತ್ ಕುಮಾರ್ ಜಮೀನಿನವರೆಗೆ ಬೇರೆ ಮನೆಗಳಿವೆ ಎಂದರೆ ನಿಜ. ಶರತ್ ಕುಮಾರ್ ಮತ್ತು ಮಲ್ಲಿಗಮ್ಮನ ನಡುವೆ ಏನು ಮಾತುಕತೆಯಾಗಿತ್ತು ಎಂದು ಗೊತ್ತಿಲ್ಲ.

*5.* ನಾನು ಅಹಲ್ಯಾ ಗ್ರಾಮಕ್ಕೆ ಹೋಗಿಲ್ಲ ಮತ್ತು ಅಹಲ್ಯಾ ಗ್ರಾಮದ ಮಧು ಇವರ ಪರಿಚಯವಿಲ್ಲ. ಶಿವರಾಜಪ್ಪನಿಗೆ ಹೊಡೆದು ಕಾಲುವೆಗೆ ಹಾಕಿದ್ದನ್ನು ನಾನು ನೋಡಿಲ್ಲ. ಆ ಬಗ್ಗೆ ಜನ ಹೇಳಿದ್ದು ಕೇಳಿ ನನಗೆ ಗೊತ್ತಿದೆ ಎಂದರೆ ನಿಜ. ಶಿವರಾಜಪ್ಪ ಇವರು ಸುಗುಣ ಇವರ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಗುವಳಿ ಮಾಡುತ್ತಿದುದ್ದು ನಿಜ ಆದರೆ ಅವರು ಖರೀದಿ ಮಾಡಿ ಸಾಗುವಳಿ ಮಾಡುತ್ತಿದ್ದರು. ಸುಗುಣ ಇವರ ಕುಟುಂಬಕ್ಕೂ ಶಿವರಾಜಪ್ಪ ಇವರ ಕುಟುಂಬಕ್ಕೂ ಜಗಳ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಸುಗುಣ ಇವರ ರಾಮಪುರ ನಾಲೆಯ ಬಳಿ ಇರುವ ಜಮೀನನ್ನು ಸಹ ಶಿವರಾಜಪ್ಪ ಸಾಗುವಳಿ ಮಾಡುತ್ತಿದ್ದ ಎಂದರೆ ನಿಜ. ಪುಟ್ಟಪ್ಪನ ಮಗ ಮೂರ್ತಿಗೂ

ಶಿವರಾಜಪ್ಪನಿಗೂ ಜಮೀನಿನ ವಿಚಾರಕ್ಕೆ ವ್ಯಾಜ್ಯ ಇತ್ತು ಎಂದರೆ ಸರಿಯಲ್ಲ. ಶಿವಪ್ಪನ ಮಗ ಮಂಜು ಜಮೀನನ್ನು ಸಹ ಶಿವರಾಜಪ್ಪ ಸಾಗುವಳಿ ಮಾಡುತ್ತಿದ್ದ ಎಂದರೆ ನಿಜ. ಶಿವರಾಜಪ್ಪನ ಜಮೀನು ಮತ್ತು ಮಂಜು ಜಮೀನು ಅಕ್ಕಪಕ್ಕದಲ್ಲಿದೆ ಎಂದರೆ ನಿಜ. ಮಂಜು ಇವರ *15* ಗುಂಟೆ ಜಮೀನನ್ನು ಶಿವರಾಜಪ್ಪ ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದ ಎಂದರೆ ನಿಜ. ಆ ಜಮೀನಿನ ಕುರಿತು ಮಂಜು ಮತ್ತು ಶಿವರಾಜಪ್ಪನ ನಡುವೆ ಹೊಡೆದಾಟವಾಗಿತ್ತು ಎಂದರೆ ಸರಿಯಲ್ಲ. ಶಿವರಾಜಪ್ಪನಿಗೆ ಊರಿನಲ್ಲಿ ಆಗದೇ ಇದ್ದವರು ಬಹಳ ಜನ ಇದ್ದರು ಎಂದರೆ ಸರಿಯಲ್ಲ. ಶರತ್ ಕುಮಾರ್ ಮನೆಯವರಿಗೆ *10–15* ಎಕರೆ ಜಮೀನು ಇದೆ ಎಂದರೆ ನಿಜ. ಅವರು ಚೆನ್ನಾಗಿ ವ್ಯವಸಾಯ ಮಾಡಿಕೊಂಡು ಮೈಸೂರಿನಲ್ಲಿ ಮನೆ ಕಟ್ಟಿದ್ದಾರೆ ಎಂದರೆ ನಿಜ. ಏನಾದರೂ ಮಾಡಿ ಶರತ್ ಕುಮಾರ್ ಅನ್ನು ಜೈಲಿಗೆ ಕಳುಹಿಸಬೇಕು ಎಂದು ನಾವೆಲ್ಲರೂ ತಂತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ. ಶರತ್ ಕುಮಾರ್ ಗೂ ಶಿವರಾಜಪ್ಪನ ಸಾವಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**2 ಮತ್ತು 3 ನೇ ಆರೋಪಿತನ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*